ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು):- ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ ಸವಿಸ್ತಾರವಾಗಿ ವರದಿ ಸಂಗ್ರಹಣೆ ಮಾಡುವುದಕ್ಕಾಗಿಲ್ಲ. ಏಕೆಂದರೆ ಇಲ್ಲಿಗೆ ಬಂದಮೇಲೆ ಮಾನ್ಯ ಶಾಸಕರಾದ ಶಿವರಾಮೇಗೌಡರು ಇದು ಬಹಳ ಕಳವಳಕ್ಕೆ ಈಡುಮಾಡಿದೆ ಎಂದು ಶಂಕೆಯನ್ನು ವ್ಯಕ್ತಮಾಡಿ, ಸಿ.ಓ.ಡಿ. ತನಿಖೆಗೆ ಡಿಮ್ಯಾಂಡ್ ಮಾಡಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಡಿಮ್ಯಾಂಡ್ ಮಾಡಿದ್ದಾರೆ. ತಕ್ಷಣ ಸಿ.ಓ.ಡಿ.ಗೆ ಮತ್ತು ಒಳ್ಳೆಯ ಅಧಿಕಾರಿ ಕಡೆಯಿಂದ ಇದನ್ನು ಪೂರ್ತಿಯಾಗಿ ಎನ್‌ಕ್ವೈರಿ ಮಾಡಿಸುತ್ತೇನೆ. ಮತ್ತು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ಯಾರೇ ತಪ್ಪಿತಸ್ಥರು ಇರಲಿ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ.

ಪ್ರಕಟಣೆ

ಅಧ್ಯಕ್ಷರು:- ಸಭೆಯನ್ನು ಮುಂದೂಡುವುದಕ್ಕೆ ಮೊದಲು ಮೂರನೇ ಅಧಿವೇಶನದಲ್ಲಿ ನಡೆಸಲಾದ ಮುಖ್ಯ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಹೇಳಲಿಚ್ಛಿಸುತ್ತೇನೆ. 1990ನೇ ಇಸವಿ ಜೂನ್ ನಾಲ್ಕರಂದು ಪ್ರಾರಂಭವಾದ ಸದನವು.....

ಬರಗಾಲ ಪರಿಸ್ಥಿತಿಯ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರೆ, ಒಂದು ನಿಮಿಷ, ಈಗ ಅನೇಕ ಜಿಲ್ಲೆಗಳಲ್ಲಿ ಮಳೆಯಾಗಿಲ್ಲ. ಇವೊತ್ತು ನಾವು ಹೋದರೆ ಇನ್ನು ಎರಡು ತಿಂಗಳು ನಾವು ಯಾರೂ ಇರುವುದಿಲ್ಲ. ರೈತನ ಪರಿಸ್ಥಿತಿ ಸರಿಯಿಲ್ಲ. ಬರಗಾಲ ಪ್ರದೇಶಕ್ಕೆ ಏನು ಅನುಕೂಲಗಳು ಆಗಬೇಕು ಎನ್ನುವ ಬಗ್ಗೆ ಇಲ್ಲಿ ಚರ್ಚೆಯಾಗಲಿಕ್ಕೆ ಸಮಯ ಇರಲಿಲ್ಲ. ಆದಕ್ಕೆ ಸರ್ಕಾರದ ಕಡೆಯಿಂದ ಅದರ ಬಗ್ಗೆ ಏನಾಗಿದೆ ಎಲ್ಲಿ ಮಳೆಯಾಗಿದೆ, ಎಲ್ಲಿ ಮಳೆ ಆಗಿಲ್ಲ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಏನಾದರೂ ಒಂದು ಹೇಳಿಕೆ ಕೊಡಬಹುದು ಏನೋ ಎಂದು ಸಭಾನಾಯಕರು ಇದ್ದಾಗ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ:- ಇದರ ಬಗ್ಗೆ ಕಾನೂನು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯ ಬಗ್ಗೆ ಮೊನ್ನೆ ಜಿಲ್ಲಾಪರಿಷತ್‌ನಲ್ಲಿ ಒಂದು ನಿರ್ಣಯ ಮಾಡಿದ್ದಾರೆ. ಇಡೀ ಜಿಲ್ಲೆ ಬರಗಾಲ ಪೀಡಿತವಾಗಿದೆ. 5 ಕೋಟಿ ರೂಪಾಯಿಯನ್ನು ಮೈಸೂರು ಜಿಲ್ಲೆಗೆ ಬಿಡುಗಡೆ ಮಾಡಬೇಕೆಂದು ಹೇಳಿ, ಮೈಸೂರು ಜಿಲ್ಲೆಯ ಜಿಲ್ಲಾಪರಿಷತ್‌ನಲ್ಲಿ ಒಂದು ನಿರ್ಣಯ ಮಾಡಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಬಹಳ ಪ್ರಮುಖವಾದಂಥ ಬರಗಾಲ ಪ್ರಾಪ್ತಿಯಾಗಿದೆ. ಆ ಜಿಲ್ಲೆ ಒಂದೇ ಅಲ್ಲ. ಬಹುಶಃ ಹಳೇ ಮೈಸೂರಿನ ಪ್ರದೇಶಗಳಲ್ಲಿ ಕೂಡ ಶುರುವಾಗಿದೆ. ನಾನಾದರೂ ಚಾಮರಾಜನಗರದ ಪರಿಸ್ಥಿತಿ ಮತ್ತೆ, ಮತ್ತೆ ಹೇಳುತ್ತಿದ್ದೇನೆಂದು ತಾವು ಭಾವಿಸಬಾರದು. ನಮ್ಮ ಚಾಮರಾಜನಗರದ ಸುವರ್ಣಾವತಿ ನದಿಯಲ್ಲಿ ನೀರು ಈಗಾಗಲೇ ಕಂಪ್ಲೀಟ್ ಆಗಿ ಒಣಗುತ್ತಾ ಬಂದಿದೆ. ಬಹುಶಃ ಇನ್ನು 15 ದಿವಸ ಕುಡಿಯತಕ್ಕ ನೀರು ಇರಬಹುದು. ಆದ್ದರಿಂದ, ಅಲ್ಲಿನ ಪರಿಸ್ಥಿತಿ ಬಹಳ ಭೀಕರವಾಗಿದೆ, ಕುಡಿಯುವ ನೀರಿಗೆ ಮತ್ತು ದನಕರುಗಳಿಗೆ ತೊಂದರೆಯಾಗುತ್ತಿದೆ. ಇಡೀ ನಮ್ಮ ಚಾಮರಾಜನಗರ ಒಂದು ರೀತಿಯ ಬರಗಾಲ ಪ್ರದೇಶವಾಗಿದೆ. ಆದಕ್ಕೋಸ್ಕರ ಆ ಒಂದು ಪ್ರದೇಶವನ್ನು ಬರಗಾಲ ಪ್ರದೇಶ ಎಂದು ತಾವು ಒಂದು ಘೋಷಣೆ ಮಾಡಬೇಕು.

MR. SPEAKER:- Will the Hon.Minister (Sri T.N.Narasimha Murthy) make note of all these things?

ಶ್ರೀ ವಾಟಾಳ್‌ನಾಗರಾಜ್:- ಅಧ್ಯಕ್ಷರೆ, ಈ ಪರಿಸ್ಥಿತಿ ಉದ್ಭವವಾಗಿದೆ. ಆದಕ್ಕೋಸ್ಕರ ಬಹಳ ಜಾಗ್ರತೆ ಈ ಗಡಿ ಪ್ರದೇಶ ಏನು ತೊಂದರೆಗೆ ಸಿಕ್ಕಿದೆ, ಅದರ ಬಗ್ಗೆ ದಯವಾಡಿ ಮಾನ್ಯ

ಮಂತ್ರಿಗಳು ಈ ಸಭೆಯಲ್ಲಿ ಒಂದೆರಡು ಮಾತುಗಳನ್ನು ಹೇಳಿ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು:- ಅವರು ಬರೆದುಕೊಳ್ಳುತ್ತಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್:- ಅಧ್ಯಕ್ಷರೇ, ಅವರು ಬರೆದುಕೊಳ್ಳುವುದರ ಜೊತೆಗೆ ಒಂದು ಮಾತು ಹೇಳಿದರೆ ಒಳ್ಳೆಯದು.

ಅಧ್ಯಕ್ಷರು:- ಈಗ ನಿಮ್ಮದು ಆಯಿತು, ಇನ್ನು ನಂಜನಗೂಡಿನ ಮಹದೇವ್ ಅವರು ಕೇಳಲಿ.

ಶ್ರೀ ಎಂ. ಮಹದೇವ್:- ಅಧ್ಯಕ್ಷರೇ, ಚಾಮರಾಜನಗರ ಒಂದೇ ಅಲ್ಲ, ನಂಜನಗೂಡಿನಲ್ಲಿಯೂ ಮತ್ತು ಗುಂಡ್ಲುಪೇಟೆ, ಮತ್ತು ಕೊಳ್ಳೇಗಾಲ ಇನ್ನೂ ಎಲ್ಲೆಲ್ಲಿ ಮಳೆ ಆಶ್ರಯದಿಂದ ಬೆಳೆಯತಕ್ಕಂಥ ಪ್ರದೇಶ ಇದೆ ಅಲ್ಲಲ್ಲಿ ಬಹಳ ಬರಗಾಲ ಬಂದಿದೆ ಮತ್ತು ಕುಡಿಯುವ ನೀರಿನ ಸಮಸ್ಯೆ ಕೂಡ ಇದೆ. ದನಕರುಗಳಿಗೆ ಮೇವು ಇಲ್ಲ. ಜನಗಳಿಗೆ ಆಹಾರಧಾನ್ಯದ ಕೊರತೆ ಇದೆ. ಆದ್ದರಿಂದ ಅಲ್ಲಿ ಆಹಾರಧಾನ್ಯ ಒದಗಿಸಿಕೊಡುವಂತಾದ್ದು, ಮೇವು ಒದಗಿಸಿಕೊಡುವಂತಹ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಮೇಪು ವಿಚಾರವನ್ನು ಬರೆದುಕೊಳ್ಳಬೇಕು.

ಶ್ರೀ ಎಂ. ಮಹದೇವ್:- ಅಧ್ಯಕ್ಷರೆ, ಅಂತೂ ಮೇವಿನ ಕೊರತೆ ಬಹಳ ಇದೆ. ಅಧ್ಯಕ್ಷರೆ, ನಾನು ಇದುವರೆಗೂ ಏನು ಹೇಳಿದ್ದೇನೆ, ಇಷ್ಟೂ ಒದಗಿಸಿಕೊಡಲಿಕ್ಕೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನೊಂದು ಬಹಳ ಮುಖ್ಯವಾದುದು ಅಂದರೆ, ಆನೆಯ ಕಾಟ ಮಾತ್ರ ಬಹಳ ಜಾಸ್ತಿಯಾಗಿದೆ. ಆನೆ ಕಾಟವನ್ನು ಮಾತ್ರ ತಾವು ಏನಾದರು ಮಾಡಿ ತಪ್ಪಿಸಬೇಕು. ಏಕೆಂದರೆ, ಬರಗಾಲದಲ್ಲಿ ಹೊಟ್ಟಿಗೂ ತೊಂದರೆ, ದನಗಳ ಮೇವಿಗೂ ತೊಂದರೆ, ಎಲ್ಲಾ ತರಹದ ತೊಂದರೆ ಇರುವುದರಿಂದ ಇದರ ಜೊತೆಗೆ ಆನೆಗಳ ತೊಂದರೆ ಕೂಡ ಆಗಬಾರದು.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಆನೆ ವಿಚಾರ ಬರೆದುಕೊಳ್ಳುವಾಗ, ಗುಂಡ್ಲು ಪೇಟೆಯಲ್ಲಿ 6ಜನ ಆನೆಯ ತುಳಿತಕ್ಕೆ ಸಿಕ್ಕಿ ಸತ್ತಿರುವ ವಿಚಾರ ಸಹ ಬರೆದುಕೊಳ್ಳಬೇಕು.

ಶ್ರೀ ವಾಟಾಳ್‌ನಾಗರಾಜ್:- ಅಧ್ಯಕ್ಷರೆ, ತಾವು ಏತಕ್ಕೆ ಈ ನಿರ್ಧಾರಕ್ಕೆ ಬರುತ್ತಿದ್ದೀರೋ ನನಗೆ ಗೊತ್ತಾಗಲಿಲ್ಲ. ಆವರದ್ದು ಆನೆ ಬರೆದುಕೊಳ್ಳಿ, ಇವರದು ಕುದುರೆ ಬರೆದುಕೊಳ್ಳಿ, ಒಂಟೆ ಬರೆದುಕೊಳ್ಳಿ, ಅಂದರೆ ಏನು ಎಂದು ನನಗೆ ಅರ್ಥವಾಗಲಿಲ್ಲ. ದಯಮಾಡಿ ತಮಗೆ ಕೈಮುಗಿದು ಕೇಳುತ್ತೇನೆ. ತಾವು ನಮಗೆ ಸ್ವಲ್ಪ....

ಅಧ್ಯಕ್ಷರು:- ನಾನು ಅವರಿಗೆ ಬರೆದುಕೊಂಡು ನೀವು ಸರ್ಕಾರದ ಪರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ಬರೆದುಕೊಳ್ಳಿ ಎಂದು ಹೇಳಿದರೆ ಏನು? ಗುಮಾಸ್ತರು ಕೆಟ್ಟೋದರೇನು ಮಾನ್ಯ ಮಂತ್ರಿಗಳು, ಸರ್ಕಾರದ ಪರವಾಗಿ ಅವರು ಬರೆದುಕೊಂಡು ಅದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ ಘೋಷಣೇ ಮಾಡಬೇಕಾಗುತ್ತದೆ. ಸುಮ್ಮನೆ ಬರೆದುಕೊಳ್ಳುವುದಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಅಧ್ಯಕ್ಷರೆ, ನಂಜನಗೂಡಿನಲ್ಲಿ ಕಬಿನಿ ಹೊಳೆ ಹರಿಯುತ್ತದೆ. ಇಲ್ಲಿ ಸುವರ್ಣಾನದಿ ಚಾಮರಾಜನಗರದಲ್ಲಿದೆ. ನನ್ನ ತಾಲ್ಲೂಕಿನಲ್ಲಿ ಯಾವ ಹೊಳೆಯೂ ಹರಿಯುತ್ತಿಲ್ಲ. ಆದೂ ಅಲ್ಲದೆ ಬಾವಿಯಲ್ಲಿರುವ ನೀರೆಲ್ಲಾ ಕೆಳಗಡೆ ಹೊರಟುಹೋಗಿದೆ. ನಾನು ಆಗಲೇ ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ಆದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಾದ ಕೆ.ಹೆಚ್. ಪಾಟೀಲರವರು ನನಗೆ ಆದಷ್ಟೂ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಬೆಳಿಗ್ಗೆ ಹೇಳಿದ ಹಾಗೆ ಆನೆಗಳ ಕಾಟ ಜಾಸ್ತಿ ಇದೆ. ಜನಗಳಿಗೆ ಹೊಟ್ಟಿಗೆ ಇಲ್ಲ, ದನಗಳಿಗೆ ಇಷ್ಟು ಉದ್ದ ಹುಲ್ಲು ಕೂಡ ಹುಟ್ಟಿಲ್ಲ. ಬೇಲಿಯಲ್ಲಿ ಇರುವಂಥ ಕಳ್ಳಿಯೆಲ್ಲಾ ಒಣಗಿ ಹೋಗಿದೆ. ಈ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಇದೆ. ಆದ್ದರಿಂದ, ನಮ್ಮ ತಾಲ್ಲೂಕಿಗೆ ಸ್ಪೆಷಲ್ ಇಂಟರೆಸ್ಟ್ ತೆಗೆದುಕೊಂಡು ಏನಾದರು ನಮಗೆ ಸಹಾಯ ಮಾಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕೇಳುತ್ತೇನೆ.

+ ಡಾ॥ ಎನ್.ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಕಳೆದ ವಾರ ಒಂದು ಅರ್ಜಿಯನ್ನು ಕೊಟ್ಟಿದ್ದೇನೆ. ನನ್ನ ತಾಲ್ಲೂಕಿನಲ್ಲಿ 1987ರಿಂದ ಅಂದರೆ ಮೂರು ವರ್ಷದಿಂದ ಮಳೆ ಸರಿಯಾಗಿ ಆಗಿಲ್ಲ. ಮೊದಲು 1987ರಲ್ಲಿ ಕೇವಲ ನಾಲ್ಕು ತಿಂಗಳು ಮಾತ್ರ ಮುಂಗಾರಿನಲ್ಲಿ ಮಳೆ ಆಗಿ, ಹಿಂಗಾರು ಮಳೆ ಕಂಪ್ಲೀಟ್ ಆಗಿ ಆಗಿಲ್ಲ. ಕಳೆದ ವರ್ಷ 11 ಇಂಚು ಮಾತ್ರ ಮಳೆಯಾಗಿದೆ. ಈ ವರ್ಷ ಮುಂಗಾರಿನಿಂದ ಇಲ್ಲಿಯವರೆಗೂ ಕಂಪ್ಲೀಟ್ ಆಗಿ ಮಳೆ ಆಗಿಲ್ಲ. ಹೇಮಾವತಿ ಜಲಾಶಯದ ನೀರನ್ನು ಆ ಭಾಗವನ್ನು ಬಿಟ್ಟು ಬಿಟ್ಟರೆ ಉಳಿದ ಭಾಗವೆಲ್ಲಾ ಕುಡಿಯುವುದಕ್ಕೆ ಎಲ್ಲಿ ನೋಡಿದರು ನೀರು ಸಿಕ್ಕುವುದಿಲ್ಲ. ಜಿಲ್ಲಾಪರಿಷತ್‌ಗೆ ನಾವು ಅರ್ಜಿಯನ್ನು ಕೊಟ್ಟಾಗಲೂ ಕೂಡ ಅವರು ಏನು ಆದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ನಮ್ಮದೊಂದೇ ತಾಲ್ಲೂಕು ಅಲ್ಲ. ನಮ್ಮ ಪಕ್ಕದ ಅರಸೀಕೆರೆ, ತಿಪಟೂರು, ನಾಗಮಂಗಲ, ಆರಕಲಗೂಡು ಬೇಲೂರಿನಲ್ಲಿನ ಕೆಲವು ಭಾಗ ಹಾಸನ ತಾಲ್ಲೂಕು ಹೀಗೆ ಸುಮಾರು 7-8 ತಾಲ್ಲೂಕುಗಳು ಏನು ಇದೆ, ಆ ಭಾಗಗಳಲ್ಲಿ 4-5 ವರ್ಷಗಳಿಂದ ಮಳೆಯಾಗಿಲ್ಲ. ಆದರ ಬಗ್ಗೆ ಕಂದಾಯ ಇಲಾಖೆ ಕೂಡ ಯಾವ ವರ್ಷ ಎಷ್ಟು ಮಳೆಯಾಗಿದೆ ಎಷ್ಟು ಎಂಚು ಮಳೆಯಾಗಿದೆ ಯಾವ ಭಾಗದಲ್ಲಿ ಎಷ್ಟು ತೊಂದರೆಯಾಗಿದೆ ಎಂಬ ಮಾಹಿತಿಯನ್ನು ಪಡೆದು ಆದರ ಬಗ್ಗೆ ಚಿಂತನೆ ಮಾಡತಕ್ಕಂತಹ ಕೆಲಸವನ್ನು ಆವರು ಮಾಡುತ್ತಿಲ್ಲ. ಸುಮಾರು ಮೂರು ತಿಂಗಳಿನಿಂದ ಜಿಲ್ಲಾ ಪರಿಷತ್‌ಗೆ ಮತ್ತು ಸರಕಾರಕ್ಕೆ ಎಷ್ಟೋ ಸಾರಿ ಪತ್ರ ಬರೆದರೂ ಕೂಡ ಯಾರೂ ಇದರ ಬಗ್ಗೆ ಗಮನ ಹರಿಸಿಲ್ಲ. ತಾವು ಸರಕಾರಕ್ಕೆ ಈ ವಿಷಯವನ್ನು ತಿಳಿಸಿ ಆದಷ್ಟು ಬೇಗ ಅನುಕೂಲವನ್ನು ಮಾಡಿಸಿಕೊಡಬೇಕು. ಏಕೆಂದರೆ ಕೆರೆ ಕಟ್ಟೆ ಬಾವಿ ಎಲ್ಲಿ ನೋಡಿದರೂ ಕೂಡ ನೀರು ಇಲ್ಲ. ಆಹಾರವನ್ನು ಎಲ್ಲಿಂದಲಾದರೂ ತರಬಹುದು, ಆದರೆ ದನಕರುಗಳಿಗೆ, ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲದ ಹಾಗಾಗಿದೆ. ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಮೂರು ದಿವಸಗಳಿಂದ ಪ್ರಯತ್ನ ಮಾಡಿದೆ. ನಾನು ಎದ್ದು ನಿಂತಾಗಲೆಲ್ಲಾ ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ತಾವು ಹೇಳುತ್ತಿದ್ದೀರಿ, ಈಗ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಮ್ಮಲ್ಲಿ ಎಷ್ಟು ಚಿಂತಾಜನಕ ಪರಿಸ್ಥಿತಿ ಇದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ನಾಳೆ ನನ್ನ ಮತ ಕ್ಷೇತ್ರಕ್ಕೆ ಹೋಗುವುದಕ್ಕೆ ಹೆದರಿಕೆ ಇದೆ. ಏಕೆಂದರೆ ಅಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ, ಏದ್ಯುಚ್ಚಕ್ತಿ ಇಲ್ಲ ಕುಡಿಯುವುದಕ್ಕೆ ನೀರು ಇಲ್ಲ ದನಕರುಗಳಿಗೆ ನೀರು ಇಲ್ಲ. ಕೆಟ್ಟು ಹೋಗಿರತಕ್ಕಂತಹ ಬೋರ್‌ವೆಲ್‌ಗಳನ್ನು ಜಿಲ್ಲಾ ಪರಿಷತ್‌ನವರು ರಿಪೇರಿ ಮಾಡಿಸಿಲ್ಲ. ಆದ್ದರಿಂದ ಆದಷ್ಟು ಬೇಗನೆ ಇದರ ಬಗ್ಗೆ ಚಿಂತನೆ ಮಾಡಿ ಆದನ್ನು ಬರ ಪೀಡಿತ ಪ್ರದೇಶವೆಂದು ಡಿಕ್ಲೇರ್ ಮಾಡಿ ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ.

+ ಶ್ರೀ ಎಸ್. ರುದ್ರಪ್ಪ:- ಮಾನ್ಯ ಅಧ್ಯಕ್ಷರೇ, ನಮ್ಮ ತುರುವೇಕರೆ ತಾಲ್ಲೂಕಿನಲ್ಲಿ ಸುಮಾರು 85 ರಿಂದ ಮಳೆ ಇಲ್ಲದೆ ಬೆಳೆ ನಷ್ಟವಾಗಿದೆ. ತೋಟದ ಬೆಳೆಗಳ ಹಾಗೂ ತೆಂಗಿನ ಅಡಿಕೆ ಗಿಡಗಳಿಗೆ ಕೂಡ ನಷ್ಟವಾಗಿರುವುದನ್ನು ನಾವು ಕಾಣುತ್ತಿದ್ದೇನೆ. 85ರಿಂದ ಇಲ್ಲಿಯವರೆಗೆ ಸತತವಾಗಿ ಬರಗಾಲವನ್ನು ನಮ್ಮ ರೈತರು ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವನ್ನಾಗಿ ಘೋಷಿಸಬೇಕೆಂದು ತಾಲ್ಲೂಕಿನಿಂದ ಮುಖ್ಯ ಮಂತ್ರಿಗಳಿಗೆ ಇದರ ಬಗ್ಗೆ ಪತ್ರವನ್ನು ಕೂಡ ಬರೆದಿದ್ದೆ. ಆದರೆ ಆದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. 90ನೇ ಇಸವಿಯ ಕಂದಾಯವನ್ನೂ ಕೂಡ ಮನ್ನಾ ಮಾಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ಕೆಟ್ಟು ಹೋಗಿರುವಂತಹ ಬೋರ್‌ವೆಲ್‌ಗಳು ಸುಮಾರು 70 ರಿಂದ 80 ರವರೆಗೆ ಇವೆ. ಇವುಗಳ ರಿಪೇರಿಯನ್ನು ಮಾಡಿಸಬೇಕು. ಅಲ್ಲಿನ ದನಕರುಗಳಿಗೆ ಕುಡಿಯುವುದಕ್ಕೆ ನೀರು ಮತ್ತು ಹುಲ್ಲಿನ ವ್ಯವಸ್ಥೆ ಇಲ್ಲ. ಸರಕಾರದವರು ಈ ಕಡೆಗೆ ಹೆಚ್ಚಿನ ಗಮನ ಕೊಟ್ಟು ನಮ್ಮ ತಾಲ್ಲೂಕನ್ನು ಬರಗಾಲ ಪೀಡಿತವೆಂದು ಘೋಷಿಸಿ ದನಕರುಗಳಿಗೆ, ಜನಗಳಿಗೆ ನೀರಿನ ವ್ಯವಸ್ಥೆ ಮತ್ತು ಮೇವಿನ ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಷಫಿಅಹಮ್ಮದ್:- ತುಮಕೂರು ಜಿಲ್ಲೆಯಲ್ಲಿ ಕಳೆದ 4-5 ವರ್ಷಗಳಿಂದ ಸಾಕಷ್ಟು ಮಳೆಯಾಗಿಲ್ಲ. ಅಲ್ಲಿನ ಜನರು ಕ್ಷಾಮಕ್ಕೆ ತುತ್ತು ಆಗಿದ್ದಾರೆ. ಜಿಲ್ಲಾ ಪರಿಷತ್ತಿನ ವತಿಯಿಂದ ಮೊನ್ನೆ ತಾನೆ ಒಂದು ನಿರ್ಣಯ ಪಾಸ್ ಮಾಡಿ ಸರಕಾರಕ್ಕೆ ಕಳಿಸಿಕೊಟ್ಟಿದ್ದೇವೆ. ಇವತ್ತು ವಾಟರ್ ಕೇಬಲ್ ಕೆಳಗೆ ಹೋಗಿರುತ್ತದೆ. ಕುಡಿಯುವ ನೀರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ತೊಂದರೆಯಾಗಿದೆ. ಅದೇ ರೀತಿ ತುಮಕೂರು ನಗರ ಅತಿ ಬೆಳೆಯುತ್ತಿರುವ ನಗರವಾಗಿದ್ದು ಅದಕ್ಕೆ 10 ಲಕ್ಷ ರೂಪಾಯಿಯನ್ನು ಸ್ಕೇರ್‌ಸಿಟಿಫಂಡ್ ಎಂದು ಕೊಡಬೇಕು. ತುಮಕೂರು ನಗರದಲ್ಲಿನ ಕೆರೆ ಒಣಗೆ ಹೋಗಿದೆ. ಆದ್ದರಿಂದ ಅಲ್ಲಿನ ಜನರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ.ಪಿ. ವೆಂಕಟೇಶ್:- ಮಾನ್ಯ ಅಧ್ಯಕ್ಷರೇ, ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಮಳೆ ಇಲ್ಲದೆ ಬೆಳೆ ಎಲ್ಲಾ ಹಾಳಾಗಿ ಹೋಗಿದೆ. ಈ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕು. ಈಗಾಗಲೇ ಮೈಸೂರು ಜಿಲ್ಲಾ ಪರಿಷತ್ತಿನವರು ಮೈಸೂರು ಜಿಲ್ಲೆಯಲ್ಲಿನ ಎಲ್ಲಾ ತಾಲ್ಲೂಕುಗಳ ವರದಿಯನ್ನು ತರಿಸಿಕೊಂಡು ಅಲ್ಲಿ ಚರ್ಚೆ ಮಾಡಿ 5 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಿದ್ದಾರೆ. ಇದನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

+ ಶ್ರೀ ಎಂ.ಸಿ. ಕುನ್ನೂರು:- ಧಾರವಾಡ ಜಿಲ್ಲೆಯಲ್ಲಿನ ಶಿಗ್ಗಾಂ ಸತತವಾಗಿ 3-4 ವರ್ಷಗಳಿಂದ ಬರ ಪೀಡಿತವಾಗಿದೆ. ಅಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಸರಿಯಾಗಿ ಇಲ್ಲ. ಅಲ್ಲಿ ಸುಮಾರು 48 ಹಳ್ಳಿಗಳಲ್ಲಿ ವಿಶೇಷವಾಗಿ ಕಳೆದ ವರ್ಷ ಕ್ರಾಪ್ ಇನ್‌ಷ್ಯೂರೆನ್ಸ್ ಮಾಡಿಸಿದ್ದು ಆ ಬಗ್ಗೆ ಕೂಡ ಯಾವುದೇ ಪರಿಹಾರ ಈ ಸರ್ಕಾರದಿಂದ ಸಿಕ್ಕಿಲ್ಲ. ಇದರ ಬಗ್ಗೆ ಕೂಡ ಸರಕಾರ ಗಮನ ಹರಿಸಬೇಕು. ಶಿಗ್ಗಾಂ, ಸವಣೂರು ಮತಕ್ಷೇತ್ರಗಳನ್ನು, ಬರಗಾಲ ಪೀಡತ ಪ್ರದೇಶವೆಂದು ಘೋಷಣೆ ಮಾಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಬಳ್ಳಾರಿಯ ಪ್ರಕರಣವನ್ನು ಪ್ರಸ್ತಾಪ ಮಾಡಿ ಹೊರಕ್ಕೆ ಹೋದರು. ಆದರೆ 1977ರಲ್ಲಿ ಕೇಂದ್ರದಲ್ಲಿ ಜನತಾ ಸರಕಾರವಿದ್ದಾಗ....

ಅಧ್ಯಕ್ಷರು:- ಆದರ ಬಗ್ಗೆ ಈಗ ಪ್ರಸ್ತಾಪ ಬೇಡ.

ಶ್ರೀ ಎಂ.ಸಿ.ಕುನ್ನೂರ್:- ಆಗ ರಾಮಕೃಷ್ಣ ಹೆಗಡೆಯವರು ಪ್ರಧಾನ ಕಾರ್ಯದರ್ಶಿ ಆಗಿದ್ದರು. ಆಗ ಅವರು....

ಅಧ್ಯಕ್ಷರು:- ಈಗ ಮತ್ತೆ ಹಿಂದಕ್ಕೆ ಹೋಗುವುದು ಬೇಡ.

ಶ್ರೀ ಎಂ.ಸಿ.ಕುನ್ನೂರ್:- ಆಯಿತು, ಈ ಎರಡು ವಿಚಾರಗಳನ್ನು ಹೇಳಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ತುಂಬು ಹೃದಯದಿಂದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಬಾಬುರಾವ್‌ಚವ್ಹಾಣ್:- ಮಾನ್ಯ ಸಭಾಧ್ಯಕ್ಷರೆ, ನಮ್ಮ ಶಹಬಾದ್ ಪಟ್ಟಣ 1 ಲಕ್ಷ ಜನಸಂಖ್ಯೆ ಇರತಕ್ಕಪಟ್ಟಣ. ಅಲ್ಲಿ ನೀರಿನ ಕೊರತೆ ಏನೂ ಇಲ್ಲ. ಕಾರಣ ಅಲ್ಲಿ ಕಾಗಿ ನದಿ ಸುಮಾರು 10-15 ಕಿಲೋಮಿಟರ್ ದೂರದಲ್ಲೇ ಹರಿಯುತ್ತಿದೆ. ಆದರೆ ದುರದೃಷ್ಟ ಎಂದರೆ 30 ವರ್ಷಗಳ ಹಿಂದೆ ನಮಗೆ 2 ಮೆಷಿನ್‌ಗಳನ್ನು ಕೊಟ್ಟಿದ್ದರು. ಅವು ಇವತ್ತು ಕೆಟ್ಟುಹೋಗಿವೆ. ಇದರಿಂದಾಗಿ ಕಳೆದ 4ದಿನಗಳಿಂದ ನಮ್ಮ ಶಹಬಾದಿಗೆ ಕುಡಿಯುವುದಕ್ಕೇ ನೀರೇ ಇಲ್ಲ. ಆದ್ದರಿಂದ ನಾನು ಸರ್ಕಾರದವರನ್ನು ಕೇಳುತ್ತಿದ್ದೇನೆ, ಈಗ ಕೆಟ್ಟುಹೋಗಿರತಕ್ಕ ಎರಡು ಮೆಷಿನ್‌ಗಳನ್ನು ರೀಪ್ಲೇಸ್ ಮಾಡಿಸಿಕೊಡಬೇಕು. ಅನಂತರ ತಾವು ಟ್ಯಾಂಕ್‌ನ್ನು ಮಾಡತಕ್ಕ ಯೋಜನೆ ಏನಿದೆ ಅದನ್ನು ಮಾಡುವವರೆಗೂ ನಾವು ಇದರಿಂದ ಕುಡಿಯುವ ನೀರನ್ನೊದಗಿಸಿಕೊಳ್ಳುತ್ತಿರುತ್ತೇವೆ. ದಯವಿಟ್ಟು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು 2 ಮೆಷಿನ್‌ಗಳನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋಪಿನಾಥ ಆರ್ ಸಾಂದ್ರ:- ಮಾನ್ಯ ಅಧ್ಯಕ್ಷರೆ, ನಮ್ಮ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸಕಾಲದಲ್ಲಿ ಮಳೆ ಬಾರದೇ ಇರುವುದರಿಂದ ಮುಂಗಾರು ಪೀಕು ಹಾಳಾಗಿ ಹೋಗಿದೆ. ಜನರು ಕೆಲಸವಿಲ್ಲದೆ ಒದ್ದಾಡುತ್ತಿದ್ದಾರೆ. ಆದ್ದರಿಂದ ಅವರಿಗೆ ಕೆಲಸವನ್ನು ಕೊಡುವ ಕಾರ್ಯಕ್ರಮಗಳನ್ನು

ತಾವು ಹಾಕಿಕೊಳ್ಳಬೇಕು, ಮತ್ತು ಕುಡಿಯುವ ನೀರು ಎಲ್ಲೆಲ್ಲಿ ಇಲ್ಲ, ಅಲ್ಲೆಲ್ಲಾ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI QUMURUL ISLAM:- Mr. Speaker Sir, all these years we were suffering from scarcity. For the first time we will suffer from the floods due to heavy rains. Due to that lot of damages took place. I request the government that they should immediately give relief.

MR. SPEAKER:- The Public Works Minister had come there. He had made an inspection.

SRI QUMURUL ISLAM:- But, still the relief has not reached. Secondly, mine is an urban constituency. We have to depend on the Corporation only and as you know the Corporation has financial problems. I wanted some provision and something should be done so that the some amount is to be given to the Corporation to provide an the civil amenities.

+ ಶ್ರೀ ಕೆ.ಹೆಚ್. ಹನುಮೇಗೌಡ:- ಮಾನ್ಯ ಸಭಾಧ್ಯಕ್ಷರೆ, ಕಳೆದ 6-7 ವರ್ಷಗಳಿಂದ ನಮ್ಮ ಭಾಗದಲ್ಲಿ ಸತತವಾಗಿ ಬರಗಾಲ ಬರುತ್ತಿದೆ. ಬರಗಾಲ ಬಂದಾಗ ಸರ್ಕಾರದವರು ಸ್ವಲ್ಪ ಕೆಲಸವನ್ನು ಕೊಡುತ್ತಾರೆ, ಆನಂತರ ಆ ಭಾಗವನ್ನು ಮರೆತುಬಿಡುತ್ತಾರೆ. ಆಲ್ಲಿ ಯಾವುದೇ ರೀತಿಯ ಶಾಶ್ವತ ಪರಿಹಾರ ಕಾರ್ಯವೂ ಕೂಡ ಆಗಿಲ್ಲ. ಜನರು ತಮ್ಮ ಹತ್ತಿರ ಇದ್ದಂಥ ಚಿನ್ನವನ್ನೆಲ್ಲಾ ಕಳೆದುಕೊಂಡಿದ್ದಾರೆ, ಕೋಟ್ಯಾಂತರ ರೂಪಾಯಿ ಸಾಲ ಮಾಡಿಕೊಂಡಿದ್ದಾರೆ, ಈಗ ಅವರಲ್ಲಿ ಏನೇನೂ ಉಳಿದಿಲ್ಲ. ಕಳೆದ 1 ವರ್ಷದಲ್ಲಿ ನಾನು ನೋಡಿದಂಥ ಚಿನ್ನ ಒಂದೊಂದು ಬ್ಯಾಂಕ್‌ನಲ್ಲಿ ಸುಮಾರು 1 ಕ್ವಿಂಟಾಲ್, 1 1/2 ಕ್ವಿಂಟಾಲ್ ಒಡವೆಗಳೂ ಸೇರಿದಂತೆ ಅಡವು ಇಟ್ಟಿದ್ದರು. ನನಗೆ ತಿಳಿದಮಟ್ಟಿಗೆ ಯಾರು ಕೂಡ ಬ್ಯಾಂಕ್‌ನಲ್ಲಿ ಇಟ್ಟಿದ್ದಂಥ ಚಿನ್ನವನ್ನಾಲಿ, ಒಡವೆಗಳನ್ನಾಗಲಿ, ಬಿಡಿಸಿಕೊಂಡು ಬರಲಿಲ್ಲ. ಅದೆಲ್ಲಾ ಹೋಯಿತು. ಕೊನೇ ಪಕ್ಷ ತಮ್ಮ ಕಷ್ಟಕಾಲದಲ್ಲಿ ಜೀವನ ಮಾಡುವುದಕ್ಕೆ, ಆಥವಾ ಮಕ್ಕಳ ಮದುವೆಯನ್ನು ಮಾಡಲಿಕ್ಕೆ ಆಥವಾ ಅನ್ನ ಬಟ್ಟೆಗೆ ಎಂದು ಏನು ಅಲ್ಪಸ್ವಲ್ಪ ಚಿನ್ನ ಇಟ್ಟುಕೊಂಡಿದ್ದರೋ ಅದೆಲ್ಲಾ ಹಾಳಾಗಿ ಹೋಗಿದೆ. ಸತತವಾಗಿ ಕಳೆದ 6-7 ವರ್ಷಗಳಿಂದ ಇದು ನಡೆಯುತ್ತಿದೆ. ಬರಗಾಲ ಬಂದಾಗ ನಾವು ಏನಾದರೂ ಇಲ್ಲಿ ಬಂದು ಹೇಳಿದರೆ ಆಗಮಾತ್ರ ಆಲ್ಲಿ ಸ್ವಲ್ಪ ಕೆಲಸವನ್ನು ಕೊಡುತ್ತಾರೆ. ಆಗಿನ ಪೂರ್ತಿಗೆ ಸ್ವಲ್ಪ ಗಂಜಿ ಕೊಡುತ್ತಾರೆ. ಇದರಿಂದಾಗಿ ಅವರು ಸಾಯುವಂತೆಯು ಇಲ್ಲ, ಬದುಕುವಂತೆಯೂ ಇಲ್ಲ. ಬಹುಶಃ ನಮ್ಮ ಭಾಗದಲ್ಲಿ ಬರಗಾಲ ಖಾಯಂ ಎಂದು ಅನಿಸುತ್ತದೆ. ಸರ್ಕಾರದವರು ಹಂಗಾಮಿಯಾಗಿ ಏನೇನು ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಆಜ್ಞೆ ಮಾಡುತ್ತದೋ ಅದನ್ನು ಮಾಡಲಿ, ಇದರ ಜೊತೆಗೆ ಎಲ್ಲೆಲ್ಲಿ ರೈನ್ ಷಾಡೋ ಏರಿಯಾ ಇದೆ, ಅಲ್ಲೆಲ್ಲಾ ಶಾಶ್ವತ ಪರಿಹಾರ ಕಾರ್ಯಕ್ರಮಗಳನ್ನು ತಜ್ಞರ ಮೂಲಕ ರೂಪಿಸಿಕೊಳ್ಳಬೇಕು. ಆಲ್ಲಿನ ಜನರು ನೆಮ್ಮದಿಯಿಂದ ಬದುಕುವುದಕ್ಕೆ ವ್ಯವಸ್ಥೆ ಮಾಡದಿದ್ದರೆ ಬಹಳ ಕಷ್ಟವಾಗುತ್ತದೆಂದು ಹೇಳಬಯಸುತ್ತೇನೆ. ಇನ್ನು ಎರಡನೆಯ ವಿಚಾರ ಎಂದರೆ ಕೆಲವುಕಡೆ ಮಳೆ ಆಗಿಲ್ಲ. ತಮಗೆ ಹೇಳುವುದಾದರೆ ಹಾಸನ [illegible]ತರ ಕಡೆಗಳಲ್ಲಿ ಎರಡು ಹದ ಮಳೆ ಬಂತು. ರೈತರು ಎಲ್ಲೆಲ್ಲೋ ಸಾಲಸೋಲ ಮಾಡಿ, ಗೊಬ್ಬರ ಹಾಕಿ ಬೀಜವನ್ನೂ ತಂದು ಹಾಕಿದರು. ಆದರೆ ಮತ್ತೆ ಮಳೆ ಬಾರದೇ ಹೋಗಿ ರೈತ ಆದುವರೆಗೆ ಮಾಡಿದ್ದ ಖರ್ಚೆಲ್ಲಾ ಸಂಪೂರ್ಣವಾಗಿ ನಷ್ಟವಾಯಿತು. ಹಾಕಿದಂಥ ಬೀಜ, ಗೊಬ್ಬರವೂ ಹೋಯಿತು, ಉಳುಮೆ ಮಾಡಿದ್ದೂ ವ್ಯರ್ಥವಾಯಿತು. ಸಾಲವನ್ನೂ ತನ್ನ ಮೈಮೇಲೆ ಎಳೆದುಕೊಂಡಿದ್ದಾಯಿತು, ಇನ್ನೂ ಮುಂತಾಗಿ ಆ ರೈತ ಕಷ್ಟಕ್ಕೆ ಸಿಕ್ಕಿಹಾಕಿಕೊಂಡ. ಈ ಪರಿಸ್ಥಿತಿಯನ್ನು ನಾವು ಯಾವ ವಾಕ್ಯದಲ್ಲಿ ಹೇಳುವುದಕ್ಕೂ ಸಾಧ್ಯವಾಗುತ್ತಿಲ್ಲ. ಸರ್ಕಾರ ಇದರ ಬಗ್ಗೆ ಇಷ್ಟೊಂದು ತಾತ್ಸಾರ ಭಾವನೆಯನ್ನು ತಾಳಬಾರದು. ಟಿಂಪೊರರಿ ರಿಲೀಫ್ ವರ್ಕ್ಸ್ ಏನೇನು ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅದನ್ನೆಲ್ಲಾ

ತೆಗೆದುಕೊಳ್ಳಬೇಕು ಮತ್ತು ಇದೇ ಸಂದರ್ಭದಲ್ಲಿ ಶಾಶ್ವತ ಪರಿಹಾರ ಕಾಮಗಾರಿಗಳನ್ನೂ ಕೂಡ ಆದ್ಯತೆಯ ಮೇಲೆ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ದನಕರುಗಳಿಗೆ ಹುಲ್ಲು ಮತ್ತು ಕುಡಿಯುವ ನೀರಿಗೆ ತಕ್ಷಣ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

+ ಶ್ರೀ ಜಿ. ರಾಜೂಗೌಡ:- ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲಾ ಪರಿಷತ್ತಿನವರು ಇಡೀ ಜಿಲ್ಲೆಗೆ 5 ಕೋಟಿ ರೂಪಾಯಿಗಳನ್ನು ಕೇಳಿಕೊಂಡಿರುವುದು ನಿಜ. ಆದರೆ ನನ್ನ ಸಲಹೆ ಏನೆಂದರೆ 1.25 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ಕಬಿನಿ ಛಾನಲ್‌ನಿಂದ ಸುಮಾರು 38 ಸಾವಿರ ಎಕರೆ, ಯಳಂದೂರು, ಕೊಳ್ಳೇಗಾಲ ತಾಲ್ಲೂಕಿನಲ್ಲಿ ನೀರಾವರಿಯಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಆರ್ಥಿಕ ಮಂತ್ರಿಗಳಿಗೆ ಹೇಳಿ ಆದಷ್ಟು ಜಾಗ್ರತೆ 1.25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಸಿದರೆ ಯಳಂದೂರು, ನರಸೀಪುರ, ಚಾಮರಾಜನಗರದ ಕೆಲವು ಭಾಗ ಹಾಗೂ ಕೊಳ್ಳೇಗಾಲದಲ್ಲಿ 38 ಸಾವಿರ ಎಕರೆಯಲ್ಲಿ ನೀರಾವರಿಯಾಗುತ್ತದೆ. ಇದನ್ನು ತಾವು ಮಾಡಿದರೆ ಬರಗಾಲ ಪೀಡಿತ ಪ್ರದೇಶ ಎಂಬ ಹೆಸರಿನಿಂದ ಈ ಭಾಗಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಆಲ್ಲಿನ ಜನರಿಗೆ ಕೆಲಸವನ್ನೂ ಕೂಡ ಕೊಟ್ಟಂತಾಗುತ್ತದೆ ಆಲ್ಲದೆ ನಮಗೆ ನೀರೂ ಕೂಡ ಬಂದಂತಾಗುತ್ತದೆ. ಆದ್ದರಿಂದ 5 ಕೋಟಿ ರೂ. ಕೊಡುವ ಬದಲು ಇಷ್ಟು ಕೆಲಸವನ್ನು ಆಲ್ಲಿ ಕೈಗೊಳ್ಳಬೇಕೆಂದು ಮತ್ತೊಮ್ಮೆ ತಮ್ಮ ಮುಖಾಂತರ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತೆ ಕೊಳ್ಳೇಗಾಲ ಪಟ್ಟಣದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದರಿಂದ 10 ಕೊಳವೆ ಬಾವಿಗಳನ್ನು ಮಂಜೂರು ಮಾಡಬೇಕೆಂದು ಕೇಳಿದ್ದೆವು. ಆಲ್ಲಿ ಕುಡಿಯುವ ನೀರಿನ ಅಭಾವ ಬಹಳ ಜಾಸ್ತಿ ಇದೆ. ಆದ್ದರಿಂದ ಅದನ್ನು ತಪ್ಪಿಸಲು ಕೊಳವೆ ಬಾವಿಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಮಾನ್ಯ ಆಧ್ಯಕ್ಷರೇ, ಕಳೆದ 6-7 ವರ್ಷಗಳಿಂದ ನಮ್ಮ ಬೇಲೂರು ತಾಲ್ಲೂಕಿನ ಎರಡು ಹೋಬಳಿಗಳಾದ ಹಳೆಬೀಡು ಮತ್ತು ಮಾದೇಹಳ್ಳಿ ಹೋಬಳಿಗಳಲ್ಲಿ ಮಳೆಬಾರದೆ ಬರಗಾಲಪೀಡಿತ ಪ್ರದೇಶಗಳಾಗಿವೆ. ಮೊದಲು ಒಂದು ಮಳೆಯಾದಾಗ ಎರಡು ಸಾವಿರ ಎಕರೆಗಳಲ್ಲಿ ಹತ್ತಿ ಬೀಜವನ್ನು ಬಿತ್ತಿದ್ದರು. ಮತ್ತೆ ಮಳೆಬಾರದೆ ಇವತ್ತು ಆಲ್ಲಿ ಎಲ್ಲವೂ ಕೂಡ ಒಣಗಿ ಹೋಗಿದೆ. ಕೆರೆಯಲ್ಲಿ ನೀರಿಲ್ಲ, ಬಾವಿಗಳಲ್ಲು ನೀರಿಲ್ಲದೆ ಕುಡಿಯುವ ನೀರಿನ ಆಭಾವ ಉಂಟಾಗಿದೆ. ನಾನು ಹಿಂದೆ ಕುಡಿಯುವ ನೀರಿನ ಬಗ್ಗೆ ತಮಗೆ ಪ್ರಶ್ನೆಯನ್ನು ಕೇಳಿ ಸರ್ಕಾರಕ್ಕೆ ಮನವಿಯನ್ನು ಮಾಡಿದ್ದೆ. ಇಂಥಿಂಥ ಗ್ರಾಮಗಳಲ್ಲಿ ಕುಡಿಯುವ ನೀರಿನ ಆಭಾವವಿದೆ, ಕೊಳವೆ ಬಾವಿಗಳನ್ನು ತೆಗೆಸಬೇಕೆಂದೂ ಪಟ್ಟಿಯನ್ನೂ ಸಹ ಕೊಟ್ಟಿದ್ದೆ. 5-6ವರ್ಷಗಳಿಂದ ಮಳೆಯಾಗದಿರುವುದರಿಂದ ಜಿಲ್ಲೆಯಲ್ಲಿರುವ ಬಾವಿಗಳ ನೀರು ಮತ್ತಷ್ಟು ತಳಕ್ಕೆ ಹೋಗಿದೆ. ಕುಡಿಯುವ ನೀರು ಜನರಿಗೆ ಮಾತ್ರವಲ್ಲ ದನಕರುಗಳಿಗೂ ಸಿಗದೆ ತೊಂದರೆಯಾಗಿದೆ. ಆದ್ದರಿಂದ ದಯವಿಟ್ಟು ಈ ಕೂಡಲೇ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಹುಲ್ಲನ್ನು ದನಗಳಿಗೆ ಒದಗಿಸಬೇಕು. ಜನರಿಗೆ ಆಹಾರಧಾನ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಕೂಡಲೇ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ):- ಸನ್ಮಾನ್ಯ ಆಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿ ಈಗಾಗಲೇ ಸ್ವಲ್ಪಮಟ್ಟಗೆ ಮಳೆಯಾಗಿದೆ. ಖುಷ್ಕಿ ಜಮೀನಿನಲ್ಲಿ ಉಳುಮೆ ಮಾಡಿಯಾಗಿದೆ. ಆದರೆ ದುರಾದೃಷ್ಟವಶಾತ್ ಆದಕ್ಕೆ ಬೇಕಾದಂಥ ರಾಸಾಯನಿಕಗೊಬ್ಬರ, ಬೇಕಾದಂಥ ಬೀಜ ನಮ್ಮ ಸರ್ಕಾರದ ವತಿಯಿಂದ ಎಷ್ಟು ಅವಶ್ಯಕತೆ ಇದೆಯೋ ಅಷ್ಟು ದಾಸ್ತಾನು ಇಲ್ಲದೆ ಇರುವುದರಿಂದ ರೈತರಿಗೆ ಬಹಳ ತೊಂದರೆ ಆಗಿದೆ. ದುರಾದೃಷ್ಟವಶಾತ್ ಮಳೆಬಾರದಿರುವುದರಿಂದ ಆಕಾಶವನ್ನು ನೋಡಿಕೊಂಡಿರತಕ್ಕಂಥ ಪರಿಸ್ಥಿತಿ ರೈತನಿಗೆ ಬಂದಿದೆ. ಈಗ ನಮ್ಮ ರಾಜ್ಯದಲ್ಲಿ ಏನು ನಡೆದಿದೆ ಎಂದರೆ, ರಾಜ್ಯದ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿರತಕ್ಕಂಥ ರಾಸಾಯನಿಕ ಗೊಬ್ಬರ ಇದನ್ನು ಖಾಸಗಿಯವರ ಮುಖಾಂತರ ಮಾರಾಟ ಮಾಡುತ್ತಿರುವುದರಿಂದ, ಆದೆಲ್ಲಾ ಬಹುತೇಕ ಹೊರ ರಾಜ್ಯಕ್ಕೆ ಹೋಗತಕ್ಕಂಥ ವಿಚಾರ ನಮ್ಮ ಗಮನಕ್ಕೆ ಬಂದಿದೆ. ವಿಶೇಷವಾಗಿ ನಮ್ಮ ಕೋಲಾರ ಜಿಲ್ಲೆ

ಬಾರ್ಡರ್‌ನಲ್ಲಿದ್ದು ಖಾಸಗಿಯವರ ಮುಖಾಂತರ ಆಂಧ್ರ ಪ್ರದೇಶದಲ್ಲಿ ಹೆಚ್ಚಿಗೆ ಬೇಡಿಕೆ ಇರುವುದರಿಂದ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕಂಥ ರಾಸಾಯನಿಕ ಗೊಬ್ಬರಗಳು ಬೇರೆ ರಾಜ್ಯಕ್ಕೆ ಹೋಗಿ ಹೆಚ್ಚಿನ ಲಾಭ ಪಡೆಯತಕ್ಕಂಥದ್ದು ನಡೆದಿದೆ. ಜೊತೆಗೆ ನಮ್ಮ ತಾಲ್ಲೂಕ್ ಮಾರಾಟ ಸಹಕಾರ ಸಂಘಗಳು ಏನು ಇವೆ, ಅವರು ಎಷ್ಟೇ ಇಂಡೆಂಟ್ ಹಾಕಿದರೂ ಸುಮಾರು ಆದರಲ್ಲಿ ಅರ್ಧಭಾದಷ್ಟು ಸಹ ಇಂಡೆಂಟ್ ಕೊಡುತ್ತಿಲ್ಲ. ಆದರೆ ಖಾಸಗಿಯವರಿಗೆ ಹೆಚ್ಚಿಗೆ ಕೊಡುತ್ತಿದ್ದಾರೆ. ಇದರ ಬಗ್ಗೆಯೂ ಸರ್ಕಾರದವರು ತೀವ್ರವಾಗಿ ಗಮನಿಸಿ, ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಖಾಸಗಿಯವರಿಗೆ ಎಷ್ಟು ಕೊಟ್ಟಿದ್ದಾರೆ, ನಮ್ಮ ರೈತರಿಗೆ ಎಷ್ಟು ಕೊಟ್ಟಿದ್ದಾರೆಂಬ ಬಗ್ಗೆ ತೀವ್ರ ತನಿಖೆ ಮಾಡಿ ಮುಂದೆ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಗಮನ ಕೊಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವನಗೌಡ ಅಮರೇಗೌಡ (ಮಾನ್ವಿ):- ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ವಿ ತಾಲ್ಲೂಕು ರಾಯಚೂರು ಜಿಲ್ಲೆಯಲ್ಲಿ ಇದೆ. ಇಲ್ಲಿ ಬಹಳವಾಗಿ ಮಳೆಯಾಗಿ ಕೆರೆಗಳು ಮತ್ತು ಸೇತುವೆಗಳು ಒಡೆದುಹೋಗಿವೆ. ಅದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದ್ದೇವೆ. ಮೊನ್ನೆ ಲೋಕೋಪಯೋಗಿ ಸಚಿವರು ಗುಲ್ಬರ್ಗಾಕ್ಕೆ ಬಂದಿದ್ದಾಗ ಇಲ್ಲಿಗೂ ಭೇಟಿ ಕೊಟ್ಟಿದ್ದರು. ಆದರೂ ನಮ್ಮ ಜಿಲ್ಲೆಗೆ ಇವತ್ತಿಗೂ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ. ಅತಿ ಹೆಚ್ಚಿನ ಮಳೆಯಿಂದ ಬೆಳೆಗಳು ಕೂಡ ಬಹಳಷ್ಟು ಹಾಳಾಗಿ ರೈತರಿಗೆ ತೊಂದರೆಯಾಗಿದೆ. ಆದ್ದರಿಂದ ಆದಷ್ಟು ತೀವ್ರವಾಗಿ ಪರಿಹಾರವನ್ನು ಕೊಡಬೇಕೆಂದು ತಮ್ಮ ಕಡೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಕೆ. ಕುಲಕರ್ಣಿ:- ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆ ನವಲಗುಂದ್ ತಾಲ್ಲೂಕ್ 4-5 ವರ್ಷಗಳಿಂದ ಬರಗಾಲದಲ್ಲಿ ಸಿಲುಕಿದೆ. ಈ ವರ್ಷವೂ ಕೂಡ ನವಲಗುಂದ್ ತಾಲ್ಲೂಕಿನಲ್ಲಿ ಮಳೆಯಾಗಿಲ್ಲ. ಈ ತಾಲ್ಲೂಕ್‌ನಲ್ಲಿರುವ 18 ಸಾವಿರ ಜನಸಂಖ್ಯೆಯಿರುವ ಎರಡು ಊರುಗಳಿಗೆ ಒಂದು ಕುಡಿಯುವ ನೀರಿನ ಯೋಜನೆಯನ್ನು ರಾಜ್ಯ ಮಂಡಲಿಯವರು ತಯಾರು ಮಾಡಿರುತ್ತಾರೆ. ಆ ಯೋಜನೆಯನ್ನು ಆದಷ್ಟು ಜಾಗ್ರತೆ ಜಾರಿಗೆ ತಂದು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಒಂದು ವಿಶಿಷ್ಟ ಎಂದರೆ ಬೋರ್ ಹೊಡೆದರೂ ಸವಳು ನೀರು ಬೀಳುತ್ತದೆ. ಇದರಿಂದಾಗಿ ನಮ್ಮ ಕ್ಷೇತ್ರದ್ದ ಪ್ರತಿಯೊಂದು ಊರಿನಲ್ಲಿಯೂ ಒಂದೊಂದು ಕೆರೆ ಇರುವುದರಿಂದ ಆ ಕೆರೆಗಳ ಹೂಳು ತೆಗೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಎಸ್. ಆಚಾರ್:- ಮಾನ್ಯ ಅಧ್ಯಕ್ಷರೇ, ಸುದೀರ್ಘವಾದ ಅಧಿವೇಶನವನ್ನು ಸುವ್ಯವಸ್ಥಿತವಾಗಿ ನಡೆಸಿಕೊಟ್ಟ ಬಗ್ಗೆ ತಮಗೆ ಕೃತಜ್ಞತೆ ಅರ್ಪಿಸುತ್ತಾ, ನನ್ನದೊಂದು 334ನೇ ಪ್ರಶ್ನೆ ಉಳಿದುಹೋಯಿತು. ಆದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಸಚಿವರು ಹಾಗು ಸದಸ್ಯರು ಬರಗಾಲದ ಭಾಯೆ ಹಲವಾರು ಕ್ಷೇತ್ರಗಳನ್ನು ಅವರಿಸತಕ್ಕ ಆತಂಕವನ್ನು ವ್ಯಕ್ತಪಡಿಸಿದರು. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಆಲೋಚನೆ ಮಾಡಿದೆ ಎಂದೂ, ಮಾನ್ಯ ಸದಸ್ಯರು ಹೇಳಿದಂತಹ ವಿಚಾರಗಳನ್ನು ಕಂದಾಯ ಸಚಿವರ ಗಮನಕ್ಕೆ ತರುವುದಾಗಿಯೂ, ಮಾನ್ಯ ಸಂಸದೀಯ ಸಚಿವರು ಹೇಳುವುದರ ಜೊತೆಗೆ ಸಂಬಂಧಪಟ್ಟ ಜಿಲ್ಲೆಗಳಿಂದ ವರದಿಗಳನ್ನು ತರಿಸಿಕೊಂಡು ಎಲ್ಲೆಲ್ಲಿ ಈ ಸಮಸ್ಯೆ ಇದೆ ಅದನ್ನು ಯಶಸ್ವಿಯಾಗಿ ಎದುರಿಸತಕ್ಕ ಸಿದ್ದತೆಗಳನ್ನು ಮಾಡಿಕೊಳ್ಳುವುದಾಗಿ ಸರ್ಕಾರ ಭರವಸೆ ಕೊಟ್ಟಿದೆ. ಮತ್ತೊಮ್ಮೆ ತಾವು ಏನಾದರೂ ಹೇಳುವುದು ಇದ್ದರೆ ಹೇಳಬಹುದು.

+ ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಅಧ್ಯಕ್ಷರೇ, ಇನ್ನೇನು ಈ ಅಧಿವೇಶನವನ್ನು ಅಂತ್ಯಗೊಳಿಸುವ ಹಂತದಲ್ಲಿ ಚಾಮರಾಜನಗರ ಕ್ಷೇತ್ರದ ಶ್ರೀಮಾನ್ ವಾಟಾಳ್ ನಾಗರಾಜ್ ಅವರು, ನಂಜನಗೂಡು ಕ್ಷೇತ್ರದ ಶ್ರೀಮಾನ್ ಮಹದೇವ್ ಅವರು, ಗುಂಡಲಪೇಟೆ ಕ್ಷೇತ್ರದ ಶ್ರೀಮತಿ ನಾಗರತ್ನಮ್ಮ ನವರು, ಚನ್ನರಾಯಪಟ್ಟಣ ಕ್ಷೇತ್ರದ ಡಾ॥ ನಂಜಪ್ಪನವರು, ತುರುವೇಕೆರೆ ಕ್ಷೇತ್ರದ

ರುದ್ರಪ್ಪನವರು, ತುಮಕೂರು ಕ್ಷೇತ್ರದ ಷಫಿ ಅಹಮ್ಮದ್‌ನವರು, ಹೆಗ್ಗಡದೇವನಕೋಟೆ ಕ್ಷೇತ್ರದ ಎಂ.ಪಿ. ವೆಂಕಟೇಶ್‌ವರು, ಶಿಗ್ಗಾವಿ ಕ್ಷೇತ್ರದ ಕುನ್ನೂರ್‌ರವರು, ಶಹಬಾದ್ ಕ್ಷೇತ್ರದ ವೈ.ಬಿ. ಚವಾಣ್‌ರವರು, ಧಾರವಾಡ ಕ್ಷೇತ್ರದ ಗೋಪಿನಾಥ್ ಸಾಂಡ್ರ ಅವರು, ಗುಲ್ಬರ್ಗ ಕ್ಷೇತ್ರದ ಕುಮರಲ್ ಇಸ್ಲಾಂ ಅವರು, ಹಾಸನ ಕ್ಷೇತ್ರದ ಹನುಮೇಗೌಡರು, ಹನೂರು ಕ್ಷೇತ್ರದ ರಾಜೂಗೌಡರು, ಶಿಡ್ಲಘಟ್ಟ ಕ್ಷೇತ್ರದ ಮುನಿಯಪ್ಪನವರು, ಸಿಂಧನೂರಿನ ಬಸವನಗೌಡರು, ನರಗುಂದ ಕ್ಷೇತ್ರದ ಕುಲಕರ್ಣಿಯವರು, ಬೈಂದೂರಿನ ಆಚಾರ್ ಅವರು, ಬೇಲೂರಿನ ಲಕ್ಷ್ಮಣಯ್ಯನವರು, ತಮ್ಮ ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೇಳಿದ್ದಾರೆ. ಎಲ್ಲರ ಹೆಸರನ್ನು ನಾನು ಬರೆದುಕೊಂಡಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಅತಿವೃಷ್ಟಿಯಾಗಿ ಅನಾನುಕೂಲವಾಗಿದೆ. ಆದರ ಬಗ್ಗೆಯೂ ಸರ್ಕಾರ ಗಮನ ಹರಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ರಾಜ್ಯದ ಹಲವಾರು ಭಾಗಗಳಲ್ಲಿ ಬರಗಾಲ ಎದ್ದು ಕಾಣುತ್ತಿದೆ. ಅಲ್ಲಿನ ಜನರಿಗೆ ಉದ್ಯೋಗದ ಸಮಸ್ಯೆ ಇದೆ. ರೈತರಿಗೆ ಬೆಳೆ ಇಲ್ಲದೆ ನಷ್ಟವಾಗಿದೆ, ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ ಎಂದೆಲ್ಲ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ತಾವು ಎಲ್ಲವನ್ನೂ ಕ್ರೋಢೀಕರಿಸಿ ಸರ್ಕಾರಕ್ಕೆ ಆದೇಶ ಕೊಡುತ್ತಿದ್ದೀರಿ. ಆ ಆದೇಶವನ್ನು ಸ್ವಾಗತಿಸಿದ್ದೇನೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ಉಪಯುಕ್ತವಾದ ಸಲಹೆಗಳನ್ನು ಬರೆದುಕೊಂಡಿದ್ದೇನೆ. ಮುಂದಿನ ಮಂತ್ರಿ ಮಂಡಲದ ಸಭೆಯಲ್ಲಿ ಈ ಎಲ್ಲಾ ವಿಚಾರಗಳನ್ನು ತಂದು, ಮಾನ್ಯ ಸದಸ್ಯರು ಸಂಕಷ್ಟವನ್ನು ಏನು ವ್ಯಕ್ತಪಡಿಸಿದ್ದಾರೆ ಆ ಬಗ್ಗೆ ಸರ್ಕಾರ ದಿಟ್ಟತನದಿಂದ ಕ್ರಮ ಕೈಗೊಳ್ಳುತ್ತದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು:- ಮಂಡ್ಯ ಜಿಲ್ಲೆಯಿಂದ ಯಾರು ಕಾಣಲಿಲ್ಲ. ಅದನ್ನು ಬರೆದುಕೊಳ್ಳಿ.

ಶ್ರೀ ಟಿ.ಎನ್ ನರಸಿಂಹಮೂರ್ತಿ:- ತಾವು ಅದೇ ಜಿಲ್ಲೆಯನ್ನು ಪ್ರತಿನಿಧಿಸುತ್ತಿರುವುದರಿಂದ ತಮ್ಮ ಸೂಚನೆಯನ್ನು ಕೂಡ ಗಮನಿಸಿದ್ದೇನೆ.

ಪ್ರಕಟಣೆ

ಸಭಾಧ್ಯಕ್ಷರು:-

ಸಭೆಯನ್ನು ಮುಂದೂಡುವುದಕ್ಕೆ ಮೊದಲು ಮೂರನೆಯ ಅಧಿವೇಶನದಲ್ಲಿ ನಡೆಸಲಾದ ಮುಖ್ಯ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ನಾನು ನೀಡಲಿಚ್ಛಿಸುತ್ತೇನೆ.

1990ನೇ ಇಸವಿ ಜೂನ್ 4ರಂದು ಪ್ರಾರಂಭವಾದ ಈ ಸದನವು 34 ದಿನಗಳ ಕಾಲ ಸಮಾವೇಶಗೊಂಡು ಅನೇಕ ಮುಖ್ಯ ವಿಷಯಗಳ ಬಗ್ಗೆ ಚರ್ಚಿಸಿತು.

ದಿನಾಂಕ 11ನೇ ಜೂನ್ 90ರಿಂದ 16ನೇ ಜುಲೈ, 1990 ರವರೆಗೆ ಒಟ್ಟು 25 ದಿನಗಳ ಕಾಲ 1990-91ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲೆ ಚರ್ಚೆ ನಡೆಸಲಾಯಿತು.

ಈ ಅವಧಿಯಲ್ಲಿ 1707 ಪ್ರಶ್ನೆಗಳನ್ನು ಸ್ವೀಕರಿಸಲಾಯಿತು. ಆ ಪೈಕಿ 575 ಚುಕ್ಕೆ ಗುರುತಿನ ಪ್ರಶ್ನೆಗಳಿದ್ದು, ಅವುಗಳಲ್ಲಿ 518 ಪ್ರಶ್ನೆಗಳನ್ನು ಸದನದಲ್ಲಿ ಉತ್ತರಿಸಲಾಗಿದೆ. 992 ಚುಕ್ಕೆ ರಹಿತ ಪ್ರಶ್ನೆಗಳಾಗಿದ್ದು, ಅವುಗಳಲ್ಲಿ 883 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡಲಾಗಿದೆ.

13 ಅಲ್ಪಕಾಲಾವಧಿಯ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ಒಂದು ಪ್ರಶ್ನೆಗೆ ಉತ್ತರಿಸಲಾಯಿತು.

ಸದಸ್ಯರುಗಳು 9 ನಿಲುವಳಿ ಸೂಚನೆಗಳನ್ನು ನೀಡಿದ್ದು, ಎಲ್ಲಾ ಸೂಚನೆಗಳಿಗೂ ಒಪ್ಪಿಗೆ ತಡೆಹಿಡಿಯಲಾಯಿತು. ಆ ಪೈಕಿ ಮೂರು ಸೂಚನೆಗಳನ್ನು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಗಳ ಇತರೆ ನಿಯಮಗಳಡಿಯಲ್ಲಿ ಚರ್ಚಿಸಲಾಯಿತು.

ನಿಯಮ 68ರ ರೀತ್ಯಾ ಅಲ್ಪಕಾಲಾವಧಿ ಮೇರೆಗೆ ಚರ್ಚಿಸಲು ಒಟ್ಟು 12 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 5 ಸೂಚನೆಗಳನ್ನು ಆಂಗೀಕರಿಸಿ ಚರ್ಚಿಸಲಾಯಿತು.